RegdNo B G155 Sri 17—7—1955

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆಸಿರಸ್ತೇದಾರ್ ಎಂ ಏ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರಿಣಿ ಎಂ.ಎಸ್ ಕೃಷ್ಣರಾವ್ 2

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುರುಷರ ನಿಶ್ಯಕ್ತಿಗೆ ಖಾತ್ರಿಯಾದ ಡಾ॥ವನದಲ್ಲಿಯೇ ಮುಪ್ಪಾದಂತೆ ಛಾಯೆ ಸುವವರ ಮತ್ತು ಸಂಸಾರದಲ್ಲಿ ಬಿಗುಪ್ಪಿ ಹೊಂದಿದವರು ಇಂದೇ ಡಾ॥ ಮೋತಿಯವರ ಸಲಹೆ ಪಡೆಯಿರಿ.

ಇವರು ನರಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಾವಸ್ಥೆ, ಸ್ತ್ರೀಯರ ಋತು ಸಾಧ್ಯದ ತೊಂದರೆ, ಮತ್ತು ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಗುಣ ಮಾಡಿಸುವರು.

ಜನತಾ ಡಿಸ್ಪೆನ್ಸರಿ

ಪ್ರತಿದಿನವೂ ಬೆಳಿಗ್ಗೆ 10 ರಿಂದ 1
ಸಲಹೆ ಕಾಲ ಸಂಜೆ 4 ರಿಂದ 8

ಹೆಡ್ ಆಫೀಸ್ :
— ಸುಬೇದಾರ್ ಚತ್ರಂ ರೋಡ್
ಬೆಂಗಳೂರು 9 : ಫೋನ್ ನಂಬ್ರ 75332

ಶ್ರೀನ್ನ ಸತ್ಯಾಗ್ರಹ

ಬೆಂಗಳೂರು— ತಾ॥ 24 ರಂದು ಹೆಬ್ಬಾಳ ಎಲಿಟಂ ಡೈರಿ ಕೆಲಸಗಾರರು ಕೆಲಸದ ಹೊತ್ತಿನಲ್ಲಿ ಆಹಾರ ಮತ್ತು ಟೀ ಸೇವಿಸದಿರಲು ನಿರ್ಧರಿಸಿದ್ದಾರೆ — ಇವರ ಸಂಬಳದಲ್ಲಿ ಬಾಡಿಗೆ ಮತ್ತು ನೀರಿನ ಚಾರ್ಜಿಗಾಗಿ ತಿಂಗಳಿಗೆ ರೂ 5 ರಂತೆ ಹಿಡಿದುಕೊಳ್ಳಲಿರುವುದೇ ಕಾರಣ ಅಷ್ಟರ ಮೂಲಕ ಮತಿಬಾಡಿಗೆ ಅಲ್ಲದೆ ಮತ್ತು ನಿರ್ವಹಣಾ ವೆಚ್ಚ ಕಾರಣವಾಗಿದೆ

★

ಸಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಅಷ್ಟಾವಧಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ವನ್ಮಣಿ
ಷಂಡಕೃಷ್ಣಜೋಯಿಸರವರಿಂದ

18 ಭಾನುವಾರ ಪಂಚಮಿ ಪೂರ್ವಾಭಾದ್ರ

ಉಪವಾಸ ಮುಷ್ಕರ ಎಂ.ಪಿ, ಎಂ ಎಲ್ ಎ ಗಳ ಸಾಮೂಹಿಕ ರಾಜೀನಾಮೆ

ಬೆಂಗಳೂರು— ರೆಪ್ಪಣ್ಣಾ ಕಸ್ಟರ್ಮೆನ್ಸ್ ನೌಕರಿಯ ಕಬ್ಬನ್ ಪೋಡಿನಲಿ ವೈಸೂರು ಸಬ್ ಏರಿಯಾ ಕಚೇರಿ ಮುಂದೆ ತಮ್ಮ ಕೀಳಿಕೆಗಳ ನಿರಿವೇರಿಕೆಗಾಗಿ ತಾ॥ 25 ಬೆಳಿಗ್ಗೆ 6 ಗಂಟೆಯಿಂದ ಉಪವಾಸ ಮುಷ್ಕರ ನಡೆಸುವರು

★

ಉಕ್ಕಿನ ಯಂತ್ರಾಗಾರಕ್ಕೆ

ಬೆಂಗಳೂರು— ಇದನೇ ಉಕ್ಕಿನ ಯಂತ್ರಾಗಾರಕ್ಕೆ ವಿಶಾಖಪಟ್ಟಣಕ್ಕಿಂತ ಹೊಸ್ಪೇಟೆಯೇ ಸರಿಯಾದ್ದೆಂದು ವೈಸೂರು ಚೇಂಬರ್ ಆಫ್ ಕಾಮರ್ಸಿನ ಅಧ್ಯಕ್ಷರು ಹೇಳಿದರು

★

ಹಣ ದುರುಪಯೋಗ

ಚಿತ್ರದುರ್ಗ — ತೊಪರಾಮಲ್ಲಿಗೆ ಗ್ರಾಮದ ಸರ್ವಿಸ್ಸು ಸಹಕಾರ ಸಂಘದ ಹಣವನ್ನು ಕಾರ್ಯದರ್ಶಿ ಹನುಮಂತ ರೆಡ್ಡಿಯವರು ದುರುಪಯೋಗ ಪಡಿಸಿಕೊಂಡಿರುವರೆಂದು ಜಿಲ್ಲಾ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವೊಖದ್ದಮೆ ಹಾಕಲಾಗಿದೆ

★

ಬ್ಯಾಂದಿ ಬಾಟ್ಟು

ಚಿತ್ರದುರ್ಗ— ಚಳ್ಳಕೆರೆ ತಾಲ್ಲೂಕ ಕಲಕ್ ಬಸ್ಸು ಸ್ಟ್ಯಾಂಡಿನ ಹತ್ತಿರ ಬಳಿಕೆರೆ ತಿಪ್ಪಯ್ಯನಿಂದ 24 ಬ್ಯಾಂದಿ ದಾಟಲುಗಳನ್ನು ಪೋಲೀಸರು ವಶಪಡಿಸಿಕೊಂಡರು

★

ಸಂಗೀತ

ಮದರಾಸು— ಪ್ರಖ್ಯಾತ ಸಂಗೀತ ಗಾರ್ತಿ ಶ್ರೀ ಎಂ ಎಸ್ ಸುಬ್ಬಲಕ್ಷ್ಮಿಯವರು ಸೆಪ್ಟಂಬರು 24 ರಂದು ಜನೆಂಲ ಅಸೆಂಬ್ಲಿಯಲ್ಲಿ ಸಂಗೀತ ಮಾಡುವರು

★

ಪಂಬಿ— ಗೋವಾ ವಿಲೀನ ವಿಷಯದಲ್ಲಿ ಮಹಾರಾಷ್ಟ್ರೀಯ ಉತ್ಸಾಹದ ಕೂಗು ವಿಲೀನವಿರೋಧಿಗಳ ಮತ್ತು ವೈಸೂರು ಪಂದವನ್ನು ಉದ್ವೇಗಗೊಳಿಸಿದೆ

★

ಆಮರಣಾಂತ ಉಪವಾಸ

ಬೆಂಗಳೂರು— ಕರ್ನಾಟಕ ಕಾಂತಿಕಾರಿ ಸಂಯುಕ್ತ ರಂಗದ ಕಾರ್ಯದರ್ಶಿ ಶ್ರೀ ರಾಮಕೃಷ್ಣದೇವರು ಕೇಂದ್ರವು ಗೋವಾ ವಿಷಯ ಪುನರ್ಪರಿಶೀಲಿಸದಿದ್ದರೆ ತಾವು ಆಮರಣಾಂತ ಉಪವಾಸ ಕೈಗೊಳ್ಳುವುದಾಗಿ ಬೆದರಿಕೆ ಹಾಕಿದಾರೆ

ಪ್ರವಾಹ

ತೀರ್ಥಹಳ್ಳಿ — ತುಂಗಾನದಿಯಲ್ಲಿ ಪ್ರವಾಹ ಹೆಚ್ಚುತ್ತಿದೆ

★

ಶ್ರಿವಳಿ

ಮಂಗಳೂರಿನಿಂದ ಬಂದಿರುವ ವರದಿ. 26 ವಯಸ್ಸಿನ ಶ್ರೀಮತಿ ಕೆ ಲಲಿತ ಎಂಬವರು ಸ್ಥಳೀಯ ನರ್ಸಿಂಗು ಹೋಂ ಒಂದರಲ್ಲಿ ಮೂರು ಗಂಡು ಮಕ್ಕಳನ್ನು ಪ್ರಸವಿಸಿದ್ದಾರೆ. ಅವರೆಲ್ಲರೂ ಆರೋಗ್ಯವಾಗಿದ್ದಾರೆ

★

ಕೇಂದ್ರಕ್ಕೆ ಕರೆ

ಕೇರಳ ಪ್ರದೇಶ ಕಾಂಗ್ರೆಸು ಸಮಿತಿ ಕೇಂದ್ರ ಆಹಾರ ಆಡಳಿತ ವಹಿಸಿಕೊಳ್ಳ ಬೇಕೆಂದು ನಿರ್ಣಯಿಸಿದರು.

★

ಆಗಮನ

21 ನೇ ತಾ॥ ಪ್ರಧಾನಿ ಶಾಸ್ತ್ರಿ ಯವರು ಬೆಂಗಳೂರಿಗೆ ಬರುವರು ಎ ಐ ಸಿ ಸಿ ಯಲ್ಲಿ ಭಾಗವಹಿಸಲು

ಗೋವಾ ವಿಷಯ ಪುನಃಪರಿಶೀಲನೆಗೆಳ್ಳದಿದ್ದರೆ ತಾವು ರಾಜೀನಾಮೆ ಕೊಡುವುದಾಗಿ ವೈಸೂರಿನ ಪಾರ್ಲಿಮೆಂಟು ಮತ್ತ ಶಾಸನ ಸಭಾ ಸದಸ್ಯರು ಕೇಂದ್ರಕ್ಕೆ ನೋಡೀಟ್ಸನು ಕೊಟ್ಟಿದ್ದಾರೆ — ಮಂತ್ರಿಮಂಡಲ ರಾಜೀನಾಮೆ ಕೊಡುವ ತಾಪಯವನ್ನೂ ಇವರು ಒಪ್ಪಿದಾರೆ

★

ಆಗಲೀ ಹುಷಾರು

ಬೊಂದಾಯು— ಗೋವಾ ವಿಲೀಕರಣ ಚಳವಳಿಯಲ್ಲಿ ಗೋವಾ ಮುಖ್ಯಮಂತ್ರಿ ಬಂಡೋಡ್ಕರಿಗೆ ಅಲ್ಲಿನ ಮಹಾರಾಷ್ಟ್ರೀಯರು ಪೆಂವು ನೀಡಲು ಮಹಾರಾಷ್ಟ್ರ ಮುಖ್ಯಮಂತ್ರಿ — ನಾಯಿಕರು ವಿನಂತಿಸಿದರು

ದಿವಂಗತ ನೆಹರೂವರ ಭಂವಸೆ ಗೋವಾದ ಬಗ್ಗೆ ಉಳಿಯಲಿ

ಆಹಾರ ಸಮಸ್ಯೆ

(ಲೇಖಕರು — ಶ್ರೀ ಅನಂತನರಸಿಂಹಯ್ಯಂಗಾರ್, ಹೊಗೆನೂರು)

(ಮುಂದುವರಿದುದು)

'ಕುಟುಂಬ ಯೋಜನೆ' ಯಾದರೂ ಯಶಸ್ವಿಯಾಗಬಲ್ಲುದೇ ? ಬಹು ಸಂಖ್ಯಾತರಾದ ಶ್ರಮಜೀವಿಗಳು ಇದಕ್ಕೆ ಒಪ್ಪುವುದು ಬಹಳ ಕಡಮೆ ; ಮುಸ್ಲಿಮರೂ, ಕ್ರಿಶ್ಚಿಯನರೂ ತಮ್ಮ ಮತಕ್ಕೆ ವಿರೋಧವಾದುದೆಂದು ಘೋಷಿಸಿದ್ದಾರೆ : ಯಾರೂ ಕೂಡ ಅದಕ್ಕೆ ಬಿಸ್ಸಿದಂತೆ ತೋರಿಲ್ಲ: ಇನ್ನೂ ಈ ಯೋಜನೆಗೆ ಒಪ್ಪುವವರೆಂದರೆ ಅಲ್ಪಸಂಖ್ಯಾಕರಾದ ಬುದ್ಧಿಜೀವಿ ಹಿಂದೂಗಳು. ಇದರಿಂದ ದೇಶದಲ್ಲಿ ಹಿಂದೂಗಳ ಸಂಖ್ಯೆ ಕಮ್ಮಿಯಾಗಬಹುದೇ ಹೊರತು ಒಟ್ಟು ಜನಸಂಖ್ಯೆ ಏನುತ್ಕರ್ಷದಲ್ಲವೇ ? ಆಹಾರ ಅಭಾವಕ್ಕೆ ಬೇರೆ ಏನೂ ಕಾರಣಗಳಿಲ್ಲವೇ ? ಇದ್ದಲ್ಲಿ ಅವು ಯಾವುವು ! ಅದಕ್ಕೆ ಪರಿಹಾರವೇನಾದರೂ ಇದೆಯೇ ? ಎಂಬುದನ್ನು ಪರಿಶೀಲಿಸೋಣ.

ವ್ಯವಸಾಯವನ್ನು ಸುಧಾರಿಸಲು ಪ್ರತ್ಯೇಕವಾದ ಒಂದು ಇಲಾಖೆ ಇದೆ : ಈ ಇಲಾಖೆ ಏನು ಮಾಡುತ್ತಿದೆ ಎಂಬ ವಿಚಾರ ಗ್ರಾಮಾಂತರದಲ್ಲಿ ಜನಗಳಿಗೆ ಏನೂ ತಿಳಿದಿಲ್ಲ. ಈ ಇಲಾಖೆ ಅಧಿಕಾರಿಗಳು ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ಅಥವಾ ಎರಡು ಅರೆ ಬಂಜರು ಬಿದ್ದಿರುವ ಸರ್ಕಾರಿ ಜಮೀನನ್ನು ಸುಧಾರಿತ ರೀತಿಯಲ್ಲಿ ಸಾಗುವಳಿ ಮಾಡಿ ಮಾರ್ಗದರ್ಶಕರಾಗಬಹುದಲ್ಲವೇ ?

ಈಗ ಪ್ರತಿಯೊಂದು ಗ್ರಾಮದಲ್ಲಿಯೂ ಒಂದೊಂದು ಸಹಕಾರ ಸಂಘಗಳಾಗಿವೆ : ರೈತರಿಗೆ ಸಾಲವನ್ನು ಕೊಡುವುದು, ಸಕಾಲದಲ್ಲಿ ಅದನ್ನು ವಸೂಲಾತ್ತಿಡುವುದು, ಕಬ್ಬಿಣದ ಸಾಮಾನು, ಜಿಂಕ್ ಷೀಟು, ಸೀಮೆಂಟು ಮುಂತಾದ ಹೊಗೂ ಬಿತ್ತನೆ, ಕ್ರಿಮಿನಾಶಕಗಳು, ಗೊಬ್ಬರ ಮುಂತಾದುವನ್ನು ವಿಕರಿ ಮಾಡುವುದು. ಈ ರೀತಿಯಾದ ಕೆಲಸಗಳನ್ನು ಮಾಡುವುದು ಈ ಸಹಕಾರ ಸಂಘಗಳ ಕೆಲಸ : ಆದರೆ ಇದರಲ್ಲಿ ನಡೆಯುವಷ್ಟು ಭ್ರಷ್ಟಾಚಾರ ಮತ್ಯಾವ ಇಲಾಖೆಯಲ್ಲೂ ಇಲ್ಲವೆಂದು ಹೇಳಬಹುದು ; ರೈತರಿಗೆ ಅನುಕೂಲಕ್ಕಿಂತ ಪ್ರತಿಕೂಲವೇ ಜಾಸ್ತಿ : ಇದರಿಂದ ಗ್ರಾಮದಲ್ಲಿ ವೈಮನಸ್ಯ. ಹಣವನ್ನು ದುರುಪಯೋಗಪಡಿಸಿಕೊಂಡು ಸಿಬ್ಬಂದಿ ವರ್ಗ ಕೊನೆಗೆ ಶಿಕ್ಷೆಯನ್ನು ಅನುಭವಿಸುವುದು ಮುಂತಾದುವು ಹೆಚ್ಚುತ್ತಿದೆ ; ಇದಕ್ಕೆ ಬದಲಾಗಿ ಪ್ರಾಮಾಣಿಕರೇ ಮೇಲ್ಕಂಡ ಪದಾರ್ಥಗಳನ್ನು ವಿಕರಿಮಾಡಲು ಅವಕಾಶಕೊಡುವುದು ಜಿಂಕ್‌ಷೀಟುಗಳಿಂದ ಧಾನ್ಯಕುಂಬು ವಿವಿಧಜಗಳನ್ನು ಸರ್ಕಾರವೇ ತಯಾರಿಸಿ ವಿಕರಿಗಾಗಿ ಕೊಡುವುದು ಮುಂತಾದ ಕ್ರಮಗಳಿಂದ ಹೆಚ್ಚಿನ ಅನುಕೂಲವಾಗಬಹುದು.

[ಮುಂದುವರಿಯುವುದು]

—o—

ಸಮಯೋಚಿತ ಸೂಕ್ತಿಗಳು

ಬಟ್ಟೆಯಿಂದ ಈ ರೀತಿ ವಿಚಾರ ನಡೆಸಬಹುದು— ಯೊಗ್ಯಕೆಗೆ ಬಟ್ಟೆಯೇ ಮುಖ್ಯ : ಹೀಕಾಂಬನಿಗೆ (ವಿಷ್ಣುವಿಗೆ) ಸಮುದ್ರರಾಜನು ಪುಗಳನ್ನು ಕೊಟ್ಟನು : ದಿಗಂಬರನಿಗೆ (ಶಿವನಿಗೆ) ವಿಷವನ್ನು ಕೊಟ್ಟನು.

o o o

ಪ್ರಾಂಶಂಕ್ಯದಲ್ಲೇ ಎಲ್ಲಾ ದುಃಖ ಸ್ವಾತಂತ್ರ್ಯದಲ್ಲೇ ಎಲ್ಲಾ ಸುಖ ; ಸುಖದುಃಖಗಳ ಲಕ್ಷಣವನ್ನು ಹೀಗೆ ಸಂಕ್ಷೇಪದಿಂದ ತಿಳಿದುಕೊಳ್ಳಬಹುದು.

Qdality Printing — Neat Binding

Lakshminarasimha Press

Sivarampet, Mysore

ವುಡ್‌ಲ್ಯಾಂಡ್ಸ್ ಮಹಿಮಾನ್ವಿತ 9 ನೇ ವಾರ

ಶಿ ಸ

ಜಾನ'ವರ' Janwar

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವೀರಾಜ್, ರಾಜೇಂದ್ರನಾಥ್ ಅಭಿನಯಿಸಿರುವ
ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು
ಹಾಸ್ಯವಿನೋದಗಳಿಂದ ಕೂಡಿದ 'ಈಸ್ಟ್‌ಮೆನ್ ಕಲರ್' ಹಿಂದೀ ಚಿತ್ರ

ಅಪೆರ— ಯಶಸ್ವಿ 4 ನೇ ವಾರ

ವಾರ್ನರ್ ಥಿಯೇಟರ್ಸ್‌ನವರ 100 ನೇ ಅಮೋಘ ತಮಿಳು ಚಿತ್ರ

ವಲ್ಲವನುಕ್ಕು ವಲ್ಲವನ'

ನಟವರ್ಗ— ಜಮಿನಿ ಗಣೇಶ್, ಸಾವಿತ್ರಿ, ತಂಗವೇಲು, ಅಶೋಕ್
ಮುಖ್ಯಲಕ್ಷಣ ಮನೋರಂಜನೆ [ಪ್ರತಿ ದಿನ 3 ಆಟಗಳು]

SHAKTI SUDHA

A Superb Tonic

Protect the Cow

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by Dharma prachara niratha M S Krishna Rao (Proprietor) at the Satyavadi Press Chamarajapuram, Mysore 4